ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Special Issue-3, March - April 2026, Pp. 33-43
©*IIMRD*, Mysuru

IIMRD JOURNALS
www.iimrd.com

# ಅಪರಾಧಿ ಬುಡಕಟ್ಟುಗಳು : ಒಂದು ಐತಿಹಾಸಿಕ ಅಧ್ಯಯನ

**ಮಧುಸೂಧನ್ ಸಿ[1] ಮತ್ತು ಡಾ.ಎಸ್.ನಾಗರತ್ನಮ್ಮ[2]**
[1]ಸಂಶೋಧನಾ ವಿದ್ಯಾರ್ಥಿ, [2]ಹಿರಿಯ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಸಾರಾಂಶ: (Abstract)**

*"ಅಪರಾಧಿ ಬುಡಕಟ್ಟುಗಳು" ಎಂಬ ಕಲ್ಪನೆ ಭಾರತೀಯ ಸಮಾಜದಲ್ಲಿ ಬ್ರಿಟಿಷ್ ಕಾಲದಲ್ಲಿ ರೂಪುಗೊಂಡ ಮಹತ್ವದ ಸಾಮಾಜಿಕ–ರಾಜಕೀಯ ಪರಿಕಲ್ಪನೆಯಾಗಿದೆ. ವಿಶೇಷವಾಗಿ 1871ರ Criminal Tribes Act ಮೂಲಕ ಕೆಲವು ಬುಡಕಟ್ಟುಗಳನ್ನು ಜನ್ಮಸಿದ್ಧ ಅಪರಾಧಿಗಳೆಂದು ಗುರುತಿಸುವ ಮೂಲಕ ಅವರನ್ನು ಸಮಾಜದಿಂದ ದೂರವಿಟ್ಟು ನಿಯಂತ್ರಿಸಲಾಯಿತು. ಈ ಅಧ್ಯಯನವು ಅಪರಾಧಿ ಬುಡಕಟ್ಟುಗಳ ಉಗಮ, ಬ್ರಿಟಿಷ್ ಆಡಳಿತದ ನೀತಿಗಳು, ಹಾಗೂ ಅದರ ಸಾಮಾಜಿಕ–ಆರ್ಥಿಕ ಪರಿಣಾಮಗಳನ್ನು ವಿಶ್ಲೇಷಿಸುತ್ತದೆ. ಈ ಲೇಖನದಲ್ಲಿ ವಿವಿಧ ಬುಡಕಟ್ಟುಗಳ ಜೀವನಶೈಲಿ, ವಲಸೆ ಪದ್ಧತಿ, ಹಾಗೂ ಬ್ರಿಟಿಷರ ಕಣ್ಣಿನಲ್ಲಿ ಅವುಗಳ "ಅಪರಾಧ" ಎನ್ನುವ ಲೇಬಲ್ ಹೇಗೆ ರೂಪುಗೊಂಡಿತು ಎಂಬುದನ್ನು ವಿವರಿಸಲಾಗಿದೆ. ಸ್ವಾತಂತ್ರ್ಯಾನಂತರ ಈ ಕಾಯ್ದೆಯನ್ನು ರದ್ದುಗೊಳಿಸಿ "De-notified Tribes" ಎಂದು ಪರಿವರ್ತನೆ ಮಾಡಿದರೂ, ಇವುಗಳ ಮೇಲೆ ಇರುವ ಸಾಮಾಜಿಕ ಮುದ್ರೆ ಇನ್ನೂ ಮುಂದುವರಿದಿದೆ. ಈ ಅಧ್ಯಯನವು ಇಂತಹ ಸಮುದಾಯಗಳ ಮೇಲಿನ ಅಸಮಾನತೆ, ಅತೀಕ್ರಮ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ಚರ್ಚಿಸಿ, ಸಮಾನತೆ ಮತ್ತು ಪುನರ್ವಸತಿ ಅಗತ್ಯವನ್ನು ಒತ್ತಿಹೇಳುತ್ತದೆ. ಸಮಗ್ರವಾಗಿ, ಅಪರಾಧಿ ಬುಡಕಟ್ಟುಗಳ ವಿಚಾರವು ಇತಿಹಾಸ, ಸಮಾಜಶಾಸ್ತ್ರ ಮತ್ತು ಮಾನವ ಹಕ್ಕುಗಳ ನಡುವೆ ಇರುವ ಮಹತ್ವದ ಅಧ್ಯಯನ ಕ್ಷೇತ್ರವಾಗಿದೆ.*

**ಮುಖ್ಯಪದಗಳು (Keywords):** *ಕರ್ನಾಟಕ ಇತಿಹಾಸ, ಬುಡಕಟ್ಟುಗಳು, ಅಪರಾಧಿ ಬುಡಕಟ್ಟುಗಳು, ವಿಮುಕ್ತ ಬುಡಕಟ್ಟುಗಳು.*

## ಪೀಠಿಕೆ

ಬ್ರಿಟಿಷರು ತಮ್ಮ ಆಡಳಿತಕ್ಕೆ ತೊಂದರೆ ನೀಡುತ್ತಿದ್ದ, ಅರಣ್ಯ ಪ್ರದೇಶದಲ್ಲಿದ್ದ ಅಥವಾ ಅಲೆಮಾರಿ ಜೀವನ ನಡೆಸುತ್ತಿದ್ದ ಸಮುದಾಯಗಳನ್ನು 'ಜನ್ಮಜಾತ ಅಪರಾಧಿಗಳು' ಎಂದು ಹಣೆಪಟ್ಟಿಯನ್ನು ಕಟ್ಟಿದ್ದರು. ಈ ಸಮುದಾಯಗಳನ್ನು ಅಥವಾ ವ್ಯಕ್ತಿಗಳನ್ನು ಜನ್ಮತಃ ಅಪರಾಧಿಗಳು ಎಂದು ಗುರುತಿಸುವ ಮೂಲಕ ಅಪರಾಧದ ಹಣೆಪಟ್ಟಿಯನ್ನು ಇಡೀ ಸಮುದಾಯಕ್ಕೆ ವ್ಯಕ್ತಿಗಳ ಹುಟ್ಟಿನ ಮೂಲಕವೇ ಅಂಟಿಸಲಾಗುತ್ತಿತ್ತು.

*Please cite this article as:* ಮಧುಸೂಧನ್.ಸಿ ಮತ್ತು ಎಸ್.ನಾಗರತ್ನಮ್ಮ. (2026). ಅಪರಾಧಿ ಬುಡಕಟ್ಟುಗಳು : ಒಂದು ಐತಿಹಾಸಿಕ ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ.* 33–43

ಹೀಗೆ ಜನ್ಮತಃ ಅಪರಾಧಿಗಳೆಂದು ಪರಿಗಣಿಸಲ್ಪಟ್ಟ ಸಮುದಾಯಗಳ ಜನರ ನೋಂದಣಿ, ಮೇಲ್ವಿಚಾರಣೆ ಹಾಗೂ ನಿಯಂತ್ರಣವನ್ನು ಈ ಕಾಯ್ದೆಯ ನಿಯಮಾನುಸಾರವೇ ನಿರ್ವಹಿಸಲಾಗುತ್ತಿತ್ತು. ಯಾವುದೇ ಸಂದರ್ಭದಲ್ಲಿ ಪೂರ್ವ ಸೂಚನೆ ಬಾಡಿ ವರಾಂಟ್ ನೀಡದೆಯೇ ಈ ಸಮುದಾಯಗಳ ವ್ಯಕ್ತಿಗಳನ್ನು ನಿರ್ದಿಷ್ಟ ಸಂದರ್ಭಗಳಲ್ಲಿ ಬಂಧಿಸಿ ಸೆರೆಮನೆಯಲ್ಲಿಡುವ ನಿರಂಕುಶ ಸ್ವಾತಂತ್ರ್ಯವನ್ನು ಈ ಕಾಯ್ದೆಯು ಪೊಲೀಸರಿಗೆ ಹಾಗೂ ಸರ್ಕಾರದ ಮೇಲ್ದರ್ಜೆಯ ಅಧಿಕಾರಿಗಳಿಗೆ ನೀಡಿತ್ತೆಂದರೆ ಈ ಕಾಯ್ದೆಯ ಕರಾಳತೆಯ ಆಳ ಎಷ್ಟೆಂಬುದು ನಮ್ಮ ಊಹೆಗೂ ನಿಲುಕಲಾರದು. ಇಂತಹ ಅಪರಾಧಿ ಬುಡಕಟ್ಟುಗಳ ಜನರನ್ನು ಸರ್ಕಾರವು ವಿಶೇಷ ಸೆಟಲ್ಮೆಂಟ್ಸ್ ಎಂಬ ತೆರೆದ ಜೈಲುಗಳಲ್ಲಿ ಕೂಡಿ ಹಾಕುತ್ತಿತ್ತು.[1]

ಸರ್ಕಾರಕ್ಕೆ ಅಗತ್ಯವೆಂದು ಕಂಡುಬಂದ ಪಕ್ಷದಲ್ಲಿ ಸದರಿಪಟ್ಟಿಯಲ್ಲಿರುವ ಯಾವುದೇ ಸಮುದಾಯದ /ಸಮುದಾಯಗಳ ಇಡೀ ಕುಟುಂಬಗಳನ್ನು ಅಥವಾ ಗುಂಪುಗಳನ್ನು ದೂರದ ಪ್ರತ್ಯೇಕ ಸ್ಥಳಗಳಿಗೆ ಮುಲಾಜಿಲ್ಲದೆ ಸಾಗಿಸಲಾಗುತ್ತಿತ್ತು. ಅಂತಹ ಮುಕ್ತ ಜೈಲುಗಳಲ್ಲಿಟ್ಟು ಕೆಲಸಗಳಿಗೆ ಹಚ್ಚಿ ಬಲವಂತವಾಗಿ ದುಡಿಸಿಕೊಳ್ಳಲಾಗುತ್ತಿತ್ತು. ಬ್ರಿಟಿಷ್ ಸರ್ಕಾರವು 12 ಅಕ್ಟೋಬರ್ 1871 ರಂದು ಅಪರಾಧಿ ಬುಡಕಟ್ಟು ಕಾಯ್ದೆಯನ್ನು ಜಾರಿ ಮಾಡಿದ ನಂತರದಲ್ಲಿಯೂ ಈ ಕಾನೂನನ್ನು 1911 ಮತ್ತು 24ರಲ್ಲಿ ಹಲವಾರು ಪರಿಷ್ಕರಣೆಗಳೊಂದಿಗೆ ಮತ್ತಷ್ಟು ಕಟ್ಟುನಿಟ್ಟಾಗಿ ಜಾರಿಗೊಳಿಸಿ ಈ ಬಡಕಟ್ಟುಗಳ ಮೇಲಿನ ಬ್ರಿಟಿಷ್ ಪ್ರಭುತ್ವದ ಹಿಂಸೆಯನ್ನು ಕಾನೂನಾತ್ಮಕವಾಗಿಯೇ ಮುಂದುವರಿಸಲಾಯಿತು.

ಭಾರತೀಯ ವಸಾಹತುಶಾಹಿ ಇತಿಹಾಸದಲ್ಲಿ ಬ್ರಿಟಿಷರ ರೂಪಿಸಿದ ಅತ್ಯಂತ ಕ್ರೌರ ಮತ್ತು ಅಮಾನವೀಯ ಕಾನೂನುಗಳಲ್ಲಿ ಅಪರಾಧಿ ಬುಡಕಟ್ಟುಗಳ ಕಾಯ್ದೆ ಪ್ರಮುಖವಾದುದು ಕರ್ನಾಟಕದ ಸಂದರ್ಭದಲ್ಲಿ ಈ ಕಾಯ್ದೆಯು ಅನೇಕ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಅಸ್ಮಿತೆಯನ್ನು ಹೇಗೆ ನಾಶಪಡಿಸಿತು ಮತ್ತು ಅವರನ್ನು ಜನ್ಮಜಾತ ಅಪರಾಧಿಗಳು ಎಂದು ಹೇಗೆ ಬಿಂಬಿಸಿತ್ತು ಎಂಬುದನ್ನು ನಾವು ಕೆಳಸ್ತರದ ಹಿನ್ನೆಲೆಯಲ್ಲಿ ವಿಶ್ಲೇಷಿಸಬಹುದಾಗಿದೆ.

ಬ್ರಿಟಿಷ್ ಆಡಳಿತಾವಧಿಯಲ್ಲಿ ಭಾರತದ ಇತಿಹಾಸದ ಕಪ್ಪು ಚುಕ್ಕೆಯಾಗಿ ಉಳಿದಿರುವುದು 'ಅಪರಾಧಿ ಬುಡಕಟ್ಟುಗಳ ಕಾಯ್ದೆ' (Criminal Tribes Act, 1871). ಇದು ಕೇವಲ ಒಂದು ಕಾನೂನಾಗಿರದೆ, ಇಡೀ ಸಮುದಾಯಗಳನ್ನು ಹುಟ್ಟಿನಿಂದಲೇ ಅಪರಾಧಿಗಳೆಂದು ಮುದ್ರೆ ಒತ್ತಿದ ಅಮಾನವೀಯ ಪದ್ಧತಿಯಾಗಿತ್ತು. ಇಂದು ನಾವು ಅವರನ್ನು 'ವಿಮುಕ್ತ ಬುಡಕಟ್ಟುಗಳು' (De-notified Tribes) ಎಂದು ಕರೆದರೂ, ಅಂದು ಅವರ ಮೇಲೆ ಹೇರಲಾದ ಕಳಂಕ ಇಂದಿಗೂ ಅವರ ಜೀವನದ ಮೇಲೆ ನೆರಳು ಬೀರುತ್ತಿದೆ.[2]

### 'ಅಪರಾಧಿ ಬುಡಕಟ್ಟುಗಳ ಕಾಯ್ದೆ' (Criminal Tribes Act, 1871) ಹಿನ್ನೆಲೆ

19ನೇ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷ್ ಸರ್ಕಾರವು ಭಾರತದ ಅಲೆಮಾರಿ ಮತ್ತು ಅರೆ–ಅಲೆಮಾರಿ ಗುಂಪುಗಳನ್ನು ನಿಯಂತ್ರಿಸಲು ಈ ಕಾಯ್ದೆಯನ್ನು ಜಾರಿಗೆ ತಂದಿತು. ಬ್ರಿಟಿಷರ ದೃಷ್ಟಿಯಲ್ಲಿ,

[1] ಕೆ.ಎಂ. ಮೇತ್ರಿ, (2011). ಕರ್ನಾಟಕದ ವಿಮುಕ್ತ ಬುಡಕಟ್ಟುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

[2] ಸಿ. ರುದ್ರಪ್ಪ, (2015), ವಿಮುಕ್ತ ಚರಿತ್ರೆ, ಅಹರ್ನಿಷಿ ಪ್ರಕಾಶನ, ಶಿವಮೊಗ್ಗ.

ಸ್ಥಿರವಾಗಿ ಒಂದೆಡೆ ವಾಸಿಸದ, ಕೃಷಿ ಮಾಡದ ಮತ್ತು ತೆರಿಗೆ ಪಾವತಿಸದ ಜನರೆಲ್ಲರೂ ಸಂಶಯಾಸ್ಪದ ವ್ಯಕ್ತಿಗಳಾಗಿದ್ದರು.

**ಕಾಯ್ದೆಯ ಮುಖ್ಯ ಉದ್ದೇಶಗಳು**

- ಅಲೆಮಾರಿ ಸಮುದಾಯಗಳ ಚಲನವಲನದ ಮೇಲೆ ನಿಗಾ ಇಡುವುದು.
- ಅವರನ್ನು ಒಂದೆಡೆ ನೆಲೆಸುವಂತೆ ಮಾಡಿ, ಕೃಷಿ ಕಾರ್ಮಿಕರನ್ನಾಗಿ ಪರಿವರ್ತಿಸುವುದು.
- ಬ್ರಿಟಿಷ್ ಆಡಳಿತಕ್ಕೆ ಸವಾಲಾಗಿದ್ದ 'ಥಗ್' (Thug) ಮತ್ತು ಲೂಟಿಕೋರರನ್ನು ಹತ್ತಿಕ್ಕುವುದು.

**ಕಾಯ್ದೆಯ ಅಡಿಯಲ್ಲಿ ಸಮುದಾಯಗಳ ವರ್ಗೀಕರಣ**

1871ರ ಕಾಯ್ದೆಯು ಕೆಲವು ನಿರ್ದಿಷ್ಟ ಸಮುದಾಯಗಳನ್ನು "ಹುಟ್ಟಿನಿಂದಲೇ ಅಪರಾಧಿಗಳು" ಎಂದು ಘೋಷಿಸಿತು. ಅಂದರೆ, ಆ ಸಮುದಾಯದಲ್ಲಿ ಹುಟ್ಟಿದ ಮಗುವು ಕಾನೂನಿನ ದೃಷ್ಟಿಯಲ್ಲಿ ಹುಟ್ಟುತ್ತಲೇ ಅಪರಾಧಿಯಾಗಿರುತ್ತಿತ್ತು. ಈ ವರ್ಗೀಕರಣಕ್ಕೆ ಯಾವುದೇ ವೈಯಕ್ತಿಕ ಅಪರಾಧ ಹಿನ್ನೆಲೆಯ ಅಗತ್ಯವಿರಲಿಲ್ಲ; ಕೇವಲ ಆ ಜಾತಿಗೆ ಅಥವಾ ಪಂಗಡಕ್ಕೆ ಸೇರಿದವರಾಗಿದ್ದರೆ ಸಾಕಿತ್ತು.

**ಬ್ರಿಟಿಷ್ ಅವಧಿಯಲ್ಲಿ ಈ ಸಮುದಾಯಗಳು ಎದುರಿಸಿದ ಸಮಸ್ಯೆಗಳು.**

**ನೋಂದಣಿ:** ಈ ಸಮುದಾಯದ ಪ್ರತಿಯೊಬ್ಬ ವ್ಯಕ್ತಿಯೂ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ತನ್ನ ಹೆಸರನ್ನು ನೋಂದಾಯಿಸಿಕೊಳ್ಳಬೇಕಿತ್ತು. ಸ್ಥಳೀಯ ಸರ್ಕಾರವು ಒಂದು ಸಮುದಾಯವನ್ನು 'ಅಪರಾಧಿ ಬುಡಕಟ್ಟು' ಎಂದು ಘೋಷಿಸಿದ ತಕ್ಷಣ, ಆ ಸಮುದಾಯದ ಪ್ರತಿಯೊಬ್ಬ ಸದಸ್ಯನು (ಹೆಚ್ಚಾಗಿ ಪುರುಷರು ಮತ್ತು ಕೆಲವು ಸಂದರ್ಭಗಳಲ್ಲಿ ಹಿರಿಯ ಮಹಿಳೆಯರು) ಹತ್ತಿರದ ಪೊಲೀಸ್ ಠಾಣೆಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿತ್ತು. ಪೊಲೀಸರು ನೋಂದಣಿ ಸಮಯದಲ್ಲಿ ವ್ಯಕ್ತಿಯನ್ನು ಗುರುತಿಸಲು ಈ ಕೆಳಗಿನ ಕ್ರಮಗಳನ್ನು ಅನುಸರಿಸುತ್ತಿದ್ದರು: ಆಧುನಿಕ ವಿಧಿವಿಜ್ಞಾನದ ಆರಂಭಿಕ ಹಂತದಲ್ಲಿ, ಈ ಸಮುದಾಯದ ಜನರ ಬೆರಳಚ್ಚು ಮತ್ತು ಅಂಗೈ ಗುರುತುಗಳನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಲಾಗುತ್ತಿತ್ತು. ಮುಖದ ಮೇಲಿನ ಗುರುತುಗಳು, ಎತ್ತರ, ಮತ್ತು ಇತರ ದೈಹಿಕ ಲಕ್ಷಣಗಳನ್ನು ರಿಜಿಸ್ಟರ್‌ನಲ್ಲಿ ವಿವರವಾಗಿ ಬರೆಯಲಾಗುತ್ತಿತ್ತು.

**ಅನುಮತಿ ಪತ್ರ:** ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಹೋಗಬೇಕಾದರೂ ಪೊಲೀಸರ ಲಿಖಿತ ಅನುಮತಿ ಬೇಕಿತ್ತು. ಒಬ್ಬ ವ್ಯಕ್ತಿಯು ತನ್ನ ಗ್ರಾಮವನ್ನು ಬಿಟ್ಟು ಬೇರೆಡೆಗೆ ಹೋಗಬೇಕಾದರೆ ಪೊಲೀಸ್ ಠಾಣೆಯಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿತ್ತು.

**ರಜಾ ಪಾಸ್ :** ವ್ಯಕ್ತಿಯು ಎಲ್ಲಿಗೆ ಹೋಗುತ್ತಿದ್ದಾನೆ, ಯಾಕೆ ಹೋಗುತ್ತಿದ್ದಾನೆ ಮತ್ತು ಎಷ್ಟು ದಿನಗಳಲ್ಲಿ ಹಿಂತಿರುಗುತ್ತಾನೆ ಎಂಬ ವಿವರಗಳನ್ನು ಒಳಗೊಂಡ 'ಪಾಸ್' ಅನ್ನು ಪೊಲೀಸರು ನೀಡುತ್ತಿದ್ದರು. ಹೋಗುವ ಸ್ಥಳದ ಪೊಲೀಸ್ ಠಾಣೆಯಲ್ಲೂ ಆತ ಹಾಜರಿ ಹಾಕಬೇಕಿತ್ತು. ಈ ಪಾಸ್ ಇಲ್ಲದೆ ಪ್ರಯಾಣಿಸುವುದು ಶಿಕ್ಷಾರ್ಹ ಅಪರಾಧವಾಗಿತ್ತು.

**ನಿರಂತರ ನಿಗಾ ಮತ್ತು ಸಂಚಾರ ನಿರ್ಬಂಧ** : ಈ ಕಾಯ್ದೆಯ ಅಡಿಯಲ್ಲಿ ನೊಂದಾಯಿತರಾದವರು ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಬೇಕಾದರೂ ಸ್ಥಳೀಯ ಪೊಲೀಸ್ ಠಾಣೆಯ ಅನುಮತಿ ಪಡೆಯಬೇಕಾಗಿತ್ತು. ಅವರು ದಿನಕ್ಕೆ ಎರಡು ಬಾರಿ ಠಾಣೆಗೆ ಹಾಜರಾಗಿ ಸಹಿ ಮಾಡಬೇಕಿತ್ತು. ಇದು ಅವರ ದೈನಂದಿನ ಬದುಕು ಮತ್ತು ಉದ್ಯೋಗವನ್ನು ಸಂಪೂರ್ಣವಾಗಿ ನಾಶ ಮಾಡಿತು.

**ಸೆಟಲ್ಮೆಂಟ್ ಶಿಬಿರಗಳು**: ಅನೇಕರನ್ನು 'ಸೆಟಲ್ಮೆಂಟ್' ಎಂಬ ಹೆಸರಿನ ಮುಳ್ಳುತಂತಿಯ ಬೇಲಿಗಳಿರುವ ಶಿಬಿರಗಳಲ್ಲಿ ಇರಿಸಲಾಗುತ್ತಿತ್ತು. ಅಲ್ಲಿ ಅವರನ್ನು ಬಲವಂತದ ದುಡಿಮೆಗೆ ಹಚ್ಚಲಾಗುತ್ತಿತ್ತು. ನೋಂದಣಿ ಪ್ರಕ್ರಿಯೆಯ ಭಾಗವಾಗಿ, ಅನೇಕ ಕುಟುಂಬಗಳನ್ನು ಅವರ ಮೂಲ ಸ್ಥಳಗಳಿಂದ ಸ್ಥಳಾಂತರಿಸಿ 'ಸೆಟಲ್ಮೆಂಟ್' ಎಂಬ ನಿರ್ಬಂಧಿತ ಪ್ರದೇಶಗಳಲ್ಲಿ ಇರಿಸಲಾಗುತ್ತಿತ್ತು. ಇಲ್ಲಿ ಅವರ ಮೇಲೆ 24 ಗಂಟೆಗಳ ಕಣ್ಗಾವಲು ಇರುತ್ತಿತ್ತು ಮತ್ತು ಇವುಗಳನ್ನು ಹೆಚ್ಚಾಗಿ ಪೊಲೀಸ್ ಅಧಿಕಾರಿಗಳೇ ನಿರ್ವಹಿಸುತ್ತಿದ್ದರು.[3]

**ಆರ್ಥಿಕ ಶೋಷಣೆ ಮತ್ತು ಜೀತ ಪದ್ಧತಿ;** ಈ ಸಮುದಾಯದವರನ್ನು ಬ್ರಿಟಿಷ್ ಅಧಿಕಾರಿಗಳು ಮತ್ತು ಭೂ ಮಾಲೀಕರು ಉಚಿತ ಕಾರ್ಮಿಕರಾಗಿ ಬಳಸಿಕೊಂಡರು. ಹತ್ತಿ ಗಿರಣಿಗಳಲ್ಲಿ ರೈಲ್ವೆ ಹಳಿ ನಿರ್ಮಾಣದಲ್ಲಿ ಮತ್ತು ಕಲ್ಲು ಗಣಿಗಳಲ್ಲಿ ಇವರನ್ನು ಅತ್ಯಂತ ಕಡಿಮೆ ಕೂಲಿಗೆ ದುಡಿಸಿಕೊಳ್ಳಲಾಯಿತು.

**ಕುಟುಂಬಗಳ ವಿಘಟಣೆ:** ಹಲವು ಸಂದರ್ಭಗಳಲ್ಲಿ ಅಪರಾಧದ ಗುಣಗಳು ಹರಡಬಾರದು ಎಂಬ ಕುತರ್ಕದಿಂದ ಮಕ್ಕಳನ್ನು ಪೋಷಕರಿಂದ ದೂರ ಮಾಡಿ ಪ್ರತ್ಯೇಕ ಸುಧಾರಣಾ ಶಾಲೆಗಳಿಗೆ ಕಳುಹಿಸಲಾಗುತ್ತಿತ್ತು ಇದು ಆ ಸಮುದಾಯಗಳ ಸಾಂಸ್ಕೃತಿಕ ಬೇರುಗಳನ್ನು ಕತ್ತರಿಸಿತು.

**ಆ ತಲೆಮಾರುಗಳಿಂದ ನಡೆದು ಬಂದಿದ್ದ ಅವರ ಸ್ವತಂತ್ರ ಜೀವನ ಪದ್ಧತಿ ನಾಶವಾಯಿತು:** ತಮ್ಮ ಆಚಾರ–ವಿಚಾರಗಳನ್ನು ಪಾಲಿಸಲು ಸಾಧ್ಯವಾಗದಂತಹ ಕೃತಕ ಪರಿಸರದಲ್ಲಿ ಅವರು ಬದುಕಬೇಕಾಯಿತು. ಮಕ್ಕಳನ್ನು ಪೋಷಕರಿಂದ ಬೇರ್ಪಡಿಸುವುದು ಇದು ಅತ್ಯಂತ ಕ್ರೂರವಾದ ಕ್ರಮವಾಗಿತ್ತು. ಬ್ರಿಟಿಷ್ ಅಧಿಕಾರಿಗಳು ಮತ್ತು ಕೆಲವು ಮಿಷನರಿಗಳು "ಅಪರಾಧಿ ಮನೋಭಾವ" ತಲೆಮಾರುಗಳಿಂದ ಹರಿಯಬಾರದು ಎಂಬ ನೆಪದಲ್ಲಿ: ಮಕ್ಕಳನ್ನು ಚಿಕ್ಕ ವಯಸ್ಸಿನಲ್ಲೇ ಪೋಷಕರಿಂದ ಬೇರ್ಪಡಿಸಿ 'ರಿಫಾರ್ಮೇಟರಿ ಸ್ಕೂಲ್' (ಸುಧಾರಣಾ ಶಾಲೆ) ಅಥವಾ ಪ್ರತ್ಯೇಕ ಹಾಸ್ಟೆಲ್‌ಗಳಿಗೆ ಕಳುಹಿಸುತ್ತಿದ್ದರು. ಇದರಿಂದಾಗಿ ಪೋಷಕರು ಮತ್ತು ಮಕ್ಕಳ ನಡುವಿನ ಭಾವನಾತ್ಮಕ ಸಂಬಂಧ ಕಡಿದುಹೋಗುತ್ತಿತ್ತು ಮತ್ತು ಮಕ್ಕಳು ತಮ್ಮ ಸಮುದಾಯದ ಸಂಸ್ಕೃತಿಯಿಂದ ವಂಚಿತರಾಗುತ್ತಿದ್ದರು.

ಅನೇಕ ಬುಡಕಟ್ಟುಗಳು ಸಾಂಪ್ರದಾಯಿಕವಾಗಿ ಬುಟ್ಟಿ ಹೆಣೆಯುವುದು, ಬೇಟೆ ಆಡುವುದು ಅಥವಾ ಕಲೆಗಳ ಮೂಲಕ ಬದುಕುತ್ತಿದ್ದವು. ಕಾಯ್ದೆಯು ಅವರನ್ನು ಒಂದೆಡೆ ಕೂಡಿ ಹಾಕಿದ್ದರಿಂದ: ಅವರ ಸಾಂಪ್ರದಾಯಿಕ ವೃತ್ತಿಗಳು ನಿಂತುಹೋದವು. ಬದುಕಲು ದಾರಿ ಕಾಣದೆ ಕುಟುಂಬಗಳು ಚದುರಿಹೋಗಿ, ಕೂಲಿ ಕೆಲಸಕ್ಕಾಗಿ ಅಲೆಯುವಂತಾಯಿತು. ಒಟ್ಟಾರೆಯಾಗಿ ಹೇಳುವುದಾದರೆ, 'ಅಪರಾಧಿ' ಎಂಬ ಹಣೆಪಟ್ಟಿ

[3] Meena Radhakrishna. (2011) Dishonoured by history ' criminal tribes and british colonial policy, orient blackswan, New Delhi.

ಆ ಕುಟುಂಬಗಳಲ್ಲಿ ಆಳವಾದ ಕೀಳರಿಮೆಯನ್ನು ಬಿತ್ತಿತು. ತಂದೆಯನ್ನು ಪೊಲೀಸರು ಕರೆದೊಯ್ಯುವುದನ್ನು ನೋಡುತ್ತಾ ಬೆಳೆದ ಮಕ್ಕಳಲ್ಲಿ ವ್ಯವಸ್ಥೆಯ ಬಗ್ಗೆ ಭಯ ಮತ್ತು ಆಕ್ರೋಶ ಮನೆಮಾಡಿತು. ಇದು ಕೇವಲ ಭೌತಿಕ ವಿಘಟನೆಯಾಗಿರದೆ, ಒಂದು ಸಂಸ್ಕೃತಿಯ ಭಾವನಾತ್ಮಕ ವಿಘಟನೆಯೂ ಆಗಿತ್ತು.

**ಸಾಮಾಜಿಕ ಮತ್ತು ಸಾಂಸ್ಕೃತಿಕ ಹತ್ಯೆ:** ಈ ಕಾಯ್ದೆಯು ಕೇವಲ ಶಾರೀರಿಕ ಬಂಧನವಾಗಿರಲಿಲ್ಲ, ಇದು ಅವರ ಸಾಂಸ್ಕೃತಿಕ ಅಸ್ತಿತ್ವವನ್ನೇ ಅಳಿಸಿ ಹಾಕಿತು. ಅಲೆಮಾರಿ ಜೀವನದ ಸಮುದಾಯಗಳ ಕುಟುಂಬಗಳ ವಿಘಟನೆ ಮಾಡುವುದರ ಮೂಲಕ ಅವರ ಮಕ್ಕಳನ್ನು ಪೋಷಕರಿಂದ ಬೇರ್ಪಡಿಸಿ ಪ್ರತ್ಯೇಕ ವಸತಿ ಶಾಲೆಗಳಿಗೆ ಕಳುಹಿಸಲಾಗುತ್ತಿತ್ತು. ಇದರಿಂದ ಅವರ ಸಾಂಪ್ರದಾಯಿಕ ಜ್ಞಾನ, ಕಲೆ ಮತ್ತು ಭಾಷೆ ಪೀಳಿಗೆಯಿಂದ ಪೀಳಿಗೆಗೆ ವರ್ಗಾವಣೆಯಾಗುವುದು ನಿಂತು ಹೋಯಿತು.

ಮುಂದುವರಿದು ಈ ಒಂದು ಪದ್ಧತಿಯು ಅವರಿಗೆ ಸಾಮಾಜಿಕ ಕಳಂಕವಾಗಿ ಮಾರ್ಪಟ್ಟಿತ್ತು. ಒಂದು ಸಮುದಾಯದ ಮೇಲೆ ಅಪರಾಧಿ ಎಂಬ ಹಣ ಪಟ್ಟಿ ಬಿದ್ದಾಗ ಇಡೀ ಸಮಾಜ ಅವರನ್ನು ಅಸ್ಪೃಶ್ಯರಂತೆ ನೋಡಲು ಆರಂಭಿಸಿತು. ಇದು ಇಂದಿಗೂ ಅವರ ಆರ್ಥಿಕ ಮತ್ತು ಸಾಮಾಜಿಕ ಹಿಂದುಳಿವಿಕೆಗೆ ಕಾರಣವಾಗಿದೆ. ಈ ಒಂದು ಕಳಂಕದಿಂದ ನಮ್ಮ ಕರ್ನಾಟಕದಲ್ಲೂ ಸಹ ಅನೇಕ ಪ್ರತಿರೋಧ ಮತ್ತು ಹೋರಾಟಗಳು ನಡೆದಿದೆ. ಈ ಬುಡಕಟ್ಟು ಸಮುದಾಯಗಳು ಈ ಕಾಯ್ದೆಯ ವಿರುದ್ಧ ಸುಮ್ಮನೆ ಕೂರಲಿಲ್ಲ. ತಮ್ಮ ಹಕ್ಕಿಗಾಗಿ ಅವರು ವಿವಿಧ ರೀತಿಯಲ್ಲಿ ಪ್ರತಿರೋಧ ತೋರಿದರು. ಈ ಕಾಯ್ದೆಯನ್ನು ಪ್ರತಿಭಟಿಸುವುದಕ್ಕಾಗಿ ಅನೇಕ ಬುಡಕಟ್ಟು ಸಮುದಾಯಗಳು ತಮ್ಮ ವಾಸಿಸುವ ಪ್ರದೇಶದಿಂದ ಪಲಾಯನ ಮಾಡಲು ಹಾಗೂ ಬ್ರಿಟಿಷರ ಕಣ್ಣುತಪ್ಪಿಸಿ ದಟ್ಟಾರಣ್ಯಗಳಿಗೆ ಅಥವಾ ದೂರದ ಜಿಲ್ಲೆಗಳಿಗೆ ವಲಸೆ ಹೋಗುವ ಮೂಲಕ ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಯತ್ನಿಸಿದವು ಹಾಗೂ ತಮ್ಮ ಆಧ್ಯಾತ್ಮಿಕತೆ ಮತ್ತು ಜಾನಪದ ಪ್ರತಿರೋಧಕವಾಗಿ ಜಾನಪದ ಕಥೆಗಳಲ್ಲಿ ಬ್ರಿಟಿಷರ ದಬ್ಬಾಳಿಕೆಯನ್ನು ವ್ಯಂಗ್ಯ ಮಾಡುತ್ತಾ, ತಮ್ಮ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಿದರು.[4]

ಮುಂದುವರೆದು ಈ ಮೇಲಿನ ಎಲ್ಲಾ ಅಂಶಗಳನ್ನು ಸಬಾಲ್ಟನ್ ದೃಷ್ಟಿಕೋನದಲ್ಲಿ ನೋಡುವುದಾದರೆ ಸಬಾಲ್ಟರನ್ ಒಂದು ಮೂಲಭೂತವಾದ ಪ್ರಶ್ನೆಯನ್ನು ಎತ್ತುತ್ತದೆ: ಕಾನೂನುಗಳನ್ನು ರಚಿಸಿದ ಬ್ರಿಟಿಷರು ಅಥವಾ ತಮ್ಮ ಸಾಂಪ್ರದಾಯಿಕ ಜೀವನ ಪದ್ಧತಿಯನ್ನು ಅನುಸರಿಸುತ್ತಿದ್ದ ಈ ಬುಡಕಟ್ಟುಗಳು ಅಪರಾಧಿಗಳೇ? ನಿಜವಾದ ಅಪರಾಧಿಗಳು ಯಾರು? ಬ್ರಿಟಿಷ್ ಕಾನೂನುಗಳು ವಸಾಹತುಶಾಹಿ ಲಾಭಕ್ಕಾಗಿ ಮಾಡಲ್ಪಟ್ಟಿದ್ದವು ಆದರೆ ಈ ಬುಡಕಟ್ಟುಗಳ ಬದುಕು ಮಣ್ಣಿನ ಸಂಸ್ಕೃತಿಯ ಭಾಗವಾಗಿತ್ತು. ಆದ್ದರಿಂದ ಅಪರಾಧಿ ಎಂಬ ಹಣೆಪಟ್ಟಿ ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಅಹಂಕಾರದ ಸಂಕೇತವೇ ಹೊರತು ನೈತಿಕತೆಯಲ್ಲ. ಕರ್ನಾಟಕದ ವಿಮುಕ್ತ ಬುಡಕಟ್ಟುಗಳ ಇತಿಹಾಸವು ನಮ್ಮ ರಾಷ್ಟ್ರದ ಒಂದು ಮರೆಯಲಾಗದ ಕರಾಳ ಅಧ್ಯಾಯ ಎನ್ನಬಹುದು.

[4] Mark Brown., (2014) Criminality and Colonialism, Oxford University Press, New Delhi.

ಅವರ ಅಸ್ಮಿತೆಯನ್ನು ಮರುಸ್ಥಾಪಿಸುವುದು ಮತ್ತು ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ನಮ್ಮ ಸಂವಿಧಾನಬದ್ಧ ಜವಾಬ್ದಾರಿಯಾಗಿದೆ. ಸಬಾಲ್ಟ್ವರನ್ ದೃಷ್ಟಿಕೋನವು ಇಂತಹ ಅಂಚಿನ ಸಮುದಾಯಗಳಿಗೆ ಧ್ವನಿಯನ್ನು ನೀಡುವ ಕೆಲಸವನ್ನು ಮಾಡುತ್ತದೆ. ಮುಂದುವರೆದು ಬ್ರಿಟಿಷರ ದೃಷ್ಟಿಕೋನವು ಅಪರಾಧ ಶಾಸ್ತ್ರದ ತಪ್ಪು ವ್ಯಾಖ್ಯಾನವನ್ನು ಆಧರಿಸಿತ್ತು. ಕೆಳಕಂಡ ಪ್ರಮುಖ ಸಿದ್ಧಾಂತವು ಬ್ರಿಟಿಷರು ಈ ಕಾಯ್ದೆಯನ್ನು ಅನುಷ್ಠಾನಕ್ಕೆ ತರಲು ಪುಷ್ಟಿ ನೀಡಿದವು ಎಂದರೆ ತಪ್ಪಾಗಲಾರದು. ಆ ಕಾಲದ ಬ್ರಿಟಿಷ್ ಅಧಿಕಾರಿಗಳು ನಂಬಿದ ಪ್ರಕಾರ ಕೆಲವು ಜನರು ವಂಶಪಾರಂಪರ್ಯವಾಗಿ ಜನ್ಮತಃ ಅಪರಾಧಿಗಳಾಗಿಯೇ ಹುಟ್ಟುತ್ತಾರೆ ಎಂಬ ಸುಳ್ಳು ಸಿದ್ಧಾಂತವನ್ನು ನಂಬಿದ್ದರು. ಹಾಗಾಗಿ ಅಲೆಮಾರಿಗಳ ಮೇಲೆ ನಿಯಂತ್ರಣವನ್ನು ಸಾಧಿಸುವುದು ವಸಾಹತುಶಾಹಿ ಆಡಳಿತಕ್ಕೆ ಕಷ್ಟವಾಗಿತ್ತು. ಅವರನ್ನು ಒಂದೆಡೆ ನೆಲೆಸುವಂತೆ ಮಾಡಲು ಮತ್ತು ಅವರ ಚಲನವಲನಗಳನ್ನು ಗಮನಿಸಲು ಈ ಕಾಯ್ದೆಯನ್ನು ಒಂದು ಸಾಧನವಾಗಿ ಬಳಸಲಾಯಿತು. ಕರ್ನಾಟಕದಲ್ಲಿ ವಿಶೇಷವಾಗಿ ಧಾರವಾಡ, ಬೆಳಗಾವಿ, ಬಿಜಾಪುರ, ಭಾಗಗಳಲ್ಲಿ ಈ ಕಾಯ್ದೆಯ ಪರಿಣಾಮಗಳು ತೀವ್ರವಾಗಿದ್ದವು. ಬ್ರಿಟಿಷರ ಆಡಳಿತ ವರ್ಗಗಳಲ್ಲಿ ಈ ಬುಡಕಟ್ಟುಗಳ ಜನರನ್ನು ಅಪಾಯಕಾರಿ ಎಂದು ಬಣ್ಣಿಸಲಾಗಿತ್ತು.

ಇದು ಆ ಸಮುದಾಯಗಳ ಬಗ್ಗೆ ಸಮಾಜದಲ್ಲಿ ಆಳವಾದ ಪೂರ್ವ ಗ್ರಹಗಳನ್ನು ಸೃಷ್ಟಿಸಿತು. ಈ ಸಮುದಾಯದ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಊರಿನ ಪೊಲೀಸ್ ಠಾಣೆಗೆ ಹೋಗಿ ಪ್ರತಿದಿನ ಅಥವಾ ಪ್ರತಿವಾರ ಹಾಜರಿ ಹಾಕಬೇಕಿತ್ತು. ಹಾಜರಿ ತಪ್ಪಿದರೆ ಅವರಿಗೆ ಕಠಿಣ ಶಿಕ್ಷೆ ವಿಧಿಸಲಾಗುತ್ತಿತ್ತು. ಈ ಕಾಯಿದೆಯು ಹಲವಾರು ಸಮುದಾಯಗಳ ಕಲಾಪ್ರಕಾರಗಳನ್ನು ನಾಶ ಮಾಡಿತು. ಅನೇಕ ಬುಡಕಟ್ಟು ಸಮುದಾಯದವರು ನಾಟಕ ಮತ್ತು ಪ್ರದರ್ಶನ ಕಲೆಗಳಲ್ಲಿ ನಿಪುಣರಾಗಿದ್ದರು ಆದರೆ ಕಾಯ್ದೆಯ ನಿರ್ಬಂಧಗಳಿಂದಾಗಿ ಅವರು ತಮ್ಮ ಕಲೆಗಳನ್ನು ಪ್ರದರ್ಶಿಸಲು ಸಾಧ್ಯವಾಗದೆ ಕಲೆ ಅಳಿವಿನಂಚಿಗೆ ತಲುಪಿತು. ಮುಂದುವರೆದು ತಮ್ಮ ಸಮುದಾಯಗಳನ್ನು ಸಮಾಜದಲ್ಲಿ ಅನೇಕ ತಲೆಮಾರುಗಳ ಕಾಲ ನಾವೆಲ್ಲರೂ ಅಪರಾಧಿಗಳು ಎಂಬ ಹಣೆಪಟ್ಟಿಯೊಂದಿಗೆ ಬೆಳೆದ ಯುವಜನತೆ ಸ್ವಯಂ ಗೌರವವನ್ನು ಕಳೆದುಕೊಂಡು ಕೀಳರಿಮೆಗೆ ಒಳಗಾದರು. ಇದು ಇಂದಿಗೂ ಅವರ ಸಾಮಾಜಿಕ ಸ್ಥಾನಮಾನದ ಮೇಲೆ ಪ್ರಭಾವ ಬೀರಿದೆ.

**ಕರ್ನಾಟಕದ ಸಂದರ್ಭದಲ್ಲಿ ಅಪರಾಧಿ ಬುಡಕಟ್ಟುಗಳು**

ಕರ್ನಾಟಕದಲ್ಲಿಯೂ ಅನೇಕ ಸಮುದಾಯಗಳನ್ನು ಈ ಕಾಯ್ದೆಯಡಿ ತರಲಾಗಿತ್ತು. ಪ್ರಮುಖವಾಗಿ ಲಂಬಾಣಿ (ಬಂಜಾರ), ಕೊರಚ, ಕೊರಮ, ಹಕ್ಕಿಪಿಕ್ಕಿ, ಸುಡುಗಾಡು ಸಿದ್ಧ, ಬೆಸ್ತ ಮುಂತಾದ ಸಮುದಾಯಗಳು ಈ ದಮನಕಾರಿ ಕಾನೂನಿಗೆ ಬಲಿಯಾದವು. ಈ ಸಮುದಾಯಗಳು ಮೂಲತಃ ಅರಣ್ಯವಾಸಿಗಳು ಅಥವಾ ವ್ಯಾಪಾರಿಗಳಾಗಿದ್ದರು. ಉದಾಹರಣೆಗೆ, ಲಂಬಾಣಿಗಳು ಮೊಘಲ್ ಮತ್ತು ಬ್ರಿಟಿಷ್ ಸೈನ್ಯಕ್ಕೆ ಅಗತ್ಯ ವಸ್ತುಗಳನ್ನು ಪೂರೈಸುವ ಕೆಲಸ ಮಾಡುತ್ತಿದ್ದರು. ಆದರೆ ಸಾರಿಗೆ ವ್ಯವಸ್ಥೆಯಲ್ಲಿ ರೈಲ್ವೆ ಬಂದ ನಂತರ ಅವರ ಉದ್ಯೋಗ ನಷ್ಟವಾಗಿ, ಅವರು ಜೀವನೋಪಾಯಕ್ಕಾಗಿ ಅಲೆದಾಡಬೇಕಾಯಿತು. ಇದನ್ನು ಬ್ರಿಟಿಷರು 'ಅಪರಾಧ' ಎಂದು ಪರಿಗಣಿಸಿದರು.[5]

[5] ಟಿ.ಡಿ.ರಾಜಣ್ಣ (2018) ಅಲಕ್ಷಿತ ಸಮುದಾಯಗಳ ಇತಿಹಾಸ, ಪಲ್ಲವ ಪ್ರಕಾಶನ,. ಬೆಂಗಳೂರು

**ಬ್ರಿಟಿಷರ ವಂಶವಾಹಿ ಸಿದ್ಧಾಂತ**

ಬ್ರಿಟಿಷರು ಅಪರಾಧವು ರಕ್ತದಲ್ಲಿ ಹರಿಯುತ್ತದೆ ಎಂಬ ತಪ್ಪು ಕಲ್ಪನೆಯನ್ನು ಹೊಂದಿದ್ದರು. ಅವರ ಪ್ರಕಾರ, ಬಡಗಿ ಹೇಗೆ ಬಡಗಿಯಾಗುತ್ತಾನೋ, ಚಮ್ಮಾರ ಹೇಗೆ ಚಮ್ಮಾರನಾಗುತ್ತಾನೋ, ಹಾಗೆಯೇ ಅಪರಾಧಿಯ ಮಗ ಅಪರಾಧಿಯೇ ಆಗುತ್ತಾನೆ ಎಂಬುದು ಅವರ ವಾದವಾಗಿತ್ತು. ಈ "ಜನ್ಮಜಾತ ಅಪರಾಧಿ" ಎಂಬ ಕಲ್ಪನೆಯು ಮಾನವ ಹಕ್ಕುಗಳ ಘೋರ ಉಲ್ಲಂಘನೆಯಾಗಿತ್ತು.

**ಸ್ವಾತಂತ್ರ್ಯ ಮತ್ತು ವಿಮುಕ್ತಿ (1952)**

ಸ್ವಾತಂತ್ರೋತ್ತರ ಭಾರತದಲ್ಲಿ ಭಾರತದ ಸಂವಿಧಾನದ ಪೀಠಿಕೆಯಲ್ಲಿ ಪ್ರಸ್ತಾಪಿಸಲಾಗಿರುವ ವ್ಯಕ್ತಿ ಸ್ವಾತಂತ್ರ್ಯ, ಸಮಾನತೆ, ಸಹೋದರತೆ, ಸಾಮಾಜಿಕ ನ್ಯಾಯದ ಆಶಯಗಳನ್ನು ಎತ್ತಿ ಹಿಡಿಯುವ ಹಾಗೂ ಸಂವಿಧಾನದ 19 ಮತ್ತು 21ನೇ ವಿಧಿಗಳ ಆಶಯಗಳನ್ನು ಅಳವಡಿಸಿಕೊಳ್ಳುವ ಕರ್ತವ್ಯದ ಭಾಗವಾಗಿ ನಮ್ಮ ದೇಶದ ಪ್ರಥಮ ಪ್ರಧಾನ ಮಂತ್ರಿಯಾಗಿದ್ದ ಜವಾಹರ್ ಲಾಲ್ ನೆಹರೂ ರವರು 31 ಆಗಸ್ಟ್ 1951 ರಂದು ಕ್ರಿಮಿನಲ್ ಟ್ರೈಬ್ಸ್ ಆಕ್ಟ್ 1871 ರನ್ನು ರದ್ದುಗೊಳಿಸಿದರು.

1871 ರಿಂದ 1952ರ ವರೆಗೆ ಸುಮಾರು 80 ವರ್ಷಗಳ ಕಾಲ ಜನ್ಮತಃ ಅಪರಾಧಿಗಳು, ಕಳ್ಳ–ಕೂರಮರು, ಇನ್ನೂ ಮುಂತಾಗಿ ಕಳಂಕಗಳ ಹಣೆ ಪಟ್ಟಿ ಕಟ್ಟಿಕೊಂಡು ನೂರಾರು ಜಾತಿಗಳು ಅಗೌರವದ ಬದುಕನ್ನು ನಡೆಸಬೇಕಾಗಿತ್ತು. 1952ರಲ್ಲಿ ಈ ಜಾತಿಗಳನ್ನು ಅಪರಾಧಿ ಬುಡಕಟ್ಟುಗಳ ಪಟ್ಟಿಯಿಂದ ಬಿಡುಗಡೆ ಮಾಡಿ ವಿಮುಕ್ತ ಬುಡಕಟ್ಟುಗಳು ಎಂದು ಘೋಷಿಸಲಾಯಿತು. ಕರ್ನಾಟಕದ ಕೊರಚ, ಕೊರಮ, ಬುಡುಗ ಜಂಗಮ, ದೊಂಬರು, ಘಂಟಿಚೋರ್, ಮೊಂಡರು ಇನ್ನೂ ಮುಂತಾದ ಜಾತಿಗಳಿಗೆ ಅಂಟಿಸಲಾಗಿದ್ದ ಜನ್ಮತಃ ಅಪರಾಧಿಗಳು ಎಂಬ ಹಣೆಪಟ್ಟಿಯನ್ನು ತೆಗೆಯಲಾಯಿತು

1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದರೂ, ಈ ಸಮುದಾಯಗಳಿಗೆ ತಕ್ಷಣ ಮುಕ್ತಿ ಸಿಗಲಿಲ್ಲ. ಅಯ್ಯಂಗಾರ್ ಸಮಿತಿಯ ಶಿಫಾರಸಿನ ಮೇರೆಗೆ, 1952ರ ಆಗಸ್ಟ್ 31 ರಂದು ಭಾರತ ಸರ್ಕಾರವು 'ಅಪರಾಧಿ ಬುಡಕಟ್ಟುಗಳ ಕಾಯ್ದೆ'ಯನ್ನು ರದ್ದುಗೊಳಿಸಿತು. ಅಂದಿನಿಂದ ಈ ಸಮುದಾಯಗಳನ್ನು 'ವಿಮುಕ್ತ ಬುಡಕಟ್ಟುಗಳು' (De-notified Tribes - DNT) ಎಂದು ಕರೆಯಲಾಗುತ್ತದೆ. ಆಗಸ್ಟ್ 31 ಅನ್ನು ಇಂದಿಗೂ ಈ ಸಮುದಾಯಗಳು ತಮ್ಮ ಪಾಲಿನ 'ನೈಜ ಸ್ವಾತಂತ್ರ್ಯ ದಿನ' ಎಂದು ಆಚರಿಸುತ್ತವೆ.[6]

**ಸಮುದಾಯಗಳು ಎದುರಿಸುತ್ತಿರುವ ಇಂದಿನ ಸವಾಲುಗಳು**

ಕಾಯ್ದೆ ರದ್ದಾಗಿ ದಶಕಗಳು ಕಳೆದರೂ, ಈ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಇಂದಿಗೂ ಶೋಚನೀಯವಾಗಿದೆ.

**ಸಾಮಾಜಿಕ ಕಳಂಕ:** ಸಮಾಜವು ಇಂದಿಗೂ ಇವರನ್ನು ಸಂಶಯದ ದೃಷ್ಟಿಯಿಂದಲೇ ನೋಡುತ್ತದೆ. ಯಾವುದಾದರೂ ಗ್ರಾಮದಲ್ಲಿ ಕಳ್ಳತನವಾದರೆ, ಮೊದಲು ಈ ಸಮುದಾಯದವರನ್ನು ವಿಚಾರಣೆಗೆ ಒಳಪಡಿಸುವ ಪ್ರವೃತ್ತಿ ಪೊಲೀಸರಲ್ಲಿ ಇನ್ನೂ ಜೀವಂತವಾಗಿದೆ.

[6] Malli Gandhi and Azizul Haque sundar 2019) denotified tribes of India, Discrimination, development and change, Routledge, Newyork.

**ಸ್ಥಿರ ಆಸ್ತಿಯ ಕೊರತೆ:** ದಶಕಗಳ ಕಾಲ ಅಲೆಮಾರಿಗಳಾಗಿದ್ದ ಇವರಿಗೆ ಸ್ವಂತ ಭೂಮಿ ಅಥವಾ ದಾಖಲೆಗಳಿಲ್ಲ. ಇದರಿಂದಾಗಿ ಸರ್ಕಾರಿ ಸೌಲಭ್ಯಗಳನ್ನು ಪಡೆಯುವುದು ಕಷ್ಟವಾಗಿದೆ.

**ಶಿಕ್ಷಣದ ಕೊರತೆ**: ಬಡತನ ಮತ್ತು ಅಲೆಮಾರಿ ಜೀವನದಿಂದಾಗಿ ಮಕ್ಕಳ ಶಿಕ್ಷಣ ಕುಂಠಿತಗೊಂಡಿದೆ.

**ಗುರುತಿನ ಬಿಕ್ಕಟ್ಟು:** ಕೆಲವು ಸಮುದಾಯಗಳು ಪರಿಶಿಷ್ಟ ಜಾತಿ (SC) ಪಟ್ಟಿಯಲ್ಲಿದ್ದರೆ, ಇನ್ನು ಕೆಲವು ಪರಿಶಿಷ್ಟ ಪಂಗಡ (ST) ಅಥವಾ ಹಿಂದುಳಿದ ವರ್ಗಗಳ (OBC) ಪಟ್ಟಿಯಲ್ಲಿವೆ. ಇದು ಸೌಲಭ್ಯಗಳ ಹಂಚಿಕೆಯಲ್ಲಿ ಗೊಂದಲ ಮೂಡಿಸಿದೆ.

**ಪರಿಹಾರೋಪಾಯಗಳು ಮತ್ತು ಮುಂದಿನ ಹಾದಿ**

ವಿಮುಕ್ತ ಬುಡಕಟ್ಟುಗಳ ಅಭಿವೃದ್ಧಿಗಾಗಿ ಸರ್ಕಾರವು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ:

**ಇದಾತೆ ಸಮಿತಿ (Idate Commission) ಶಿಫಾರಸುಗಳ ಜಾರಿ:** ಈ ಸಮುದಾಯಗಳ ಜನಗಣತಿ ನಡೆಸುವುದು ಮತ್ತು ಅವರಿಗೆ ಪ್ರತ್ಯೇಕ ಮೀಸಲಾತಿಯ ಬಗ್ಗೆ ಚಿಂತಿಸುವುದು.

**ವಾಸಸ್ಥಳದ ಹಕ್ಕು:** ಇವರಿಗೆ ಕೃಷಿ ಭೂಮಿ ಮತ್ತು ವಸತಿ ಸೌಲಭ್ಯಗಳನ್ನು ಆದ್ಯತೆಯ ಮೇಲೆ ಒದಗಿಸುವುದು.

**ಪೊಲೀಸ್ ಸುಧಾರಣೆ:** ಪೊಲೀಸರಿಗೆ ಈ ಸಮುದಾಯಗಳ ಬಗ್ಗೆ ಇರುವ ಪೂರ್ವಾಗ್ರಹ ಪೀಡಿತ ಮನಸ್ಥಿತಿಯನ್ನು ಬದಲಿಸಲು ತರಬೇತಿ ನೀಡುವುದು. ಪೊಲೀಸ್ ಇಲಾಖೆಯಲ್ಲಿ ಇನ್ನೂ ಉಳಿದುಕೊಂಡಿರುವ "ಹುಟ್ಟಿನಿಂದಲೇ ಅಪರಾಧಿಗಳು" ಎಂಬ ವಸಾಹತುಶಾಹಿ ಪೂರ್ವಾಗ್ರಹವನ್ನು ಹೋಗಲಾಡಿಸಬೇಕು. ಪೊಲೀಸ್ ಅಕಾಡೆಮಿಗಳಲ್ಲಿ ತರಬೇತಿ ಪಡೆಯುವಾಗಲೇ ವಿಮುಕ್ತ ಬುಡಕಟ್ಟುಗಳ ಇತಿಹಾಸ, ಅವರು ಅನುಭವಿಸಿದ ಶೋಷಣೆ ಮತ್ತು ಅವರ ಸಾಂಸ್ಕೃತಿಕ ಹಿನ್ನೆಲೆಯ ಬಗ್ಗೆ ವಿಶೇಷ ಪಠ್ಯಗಳನ್ನು ಅಳವಡಿಸಬೇಕು. ಈ ಸಮುದಾಯದವರನ್ನು ಕಂಡ ತಕ್ಷಣ ಸಂಶಯದಿಂದ ನೋಡುವುದರ ಬದಲಿಗೆ, ಗೌರವದಿಂದ ನಡೆಸಿಕೊಳ್ಳುವ ಬಗ್ಗೆ ತರಬೇತಿ ನೀಡಬೇಕು. ಹಳೆಯ ಕಾಲದ 'ಹಜರಿ' (Roll Call) ಅಥವಾ ಅಲೆಮಾರಿಗಳ ಮೇಲೆ ನಿರಂತರ ಕಣ್ಗಾವಲು ಇಡುವ ಪದ್ಧತಿಗಳು ಪ್ರಜಾಪ್ರಭುತ್ವಕ್ಕೆ ವಿರೋಧವಾಗಿವೆ. ಪೊಲೀಸ್ ಠಾಣೆಗಳಲ್ಲಿರುವ ಹಳೆಯ 'ಕ್ರಿಮಿನಲ್ ಹಿಸ್ಟರಿ ಶೀಟ್'ಗಳಲ್ಲಿ ಸಮುದಾಯದ ಹೆಸರಿನ ಆಧಾರದ ಮೇಲೆ ವ್ಯಕ್ತಿಗಳನ್ನು ಪಟ್ಟಿ ಮಾಡುವುದನ್ನು ನಿಲ್ಲಿಸಬೇಕು. ಕೇವಲ ವೈಯಕ್ತಿಕ ಅಪರಾಧದ ಆಧಾರದ ಮೇಲೆ ಮಾತ್ರ ದಾಖಲೆ ಇರಬೇಕು. ಯಾವುದೇ ಪುರಾವೆ ಇಲ್ಲದೆ, ಕೇವಲ ಸಮುದಾಯದ ಹಿನ್ನೆಲೆ ನೋಡಿ ತಪಾಸಣೆ ಅಥವಾ ವಿಚಾರಣೆಗೆ ಒಳಪಡಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಬೇಕು. ಸಂಕ್ಷಿಪ್ತವಾಗಿ ಹೇಳುವುದಾದರೆ: ಪೊಲೀಸ್ ವ್ಯವಸ್ಥೆಯು ಈ ಸಮುದಾಯಗಳನ್ನು "ನಿಯಂತ್ರಿಸಬೇಕಾದ ಜನ"

ಎಂದು ನೋಡುವ ಬದಲು "ರಕ್ಷಿಸಬೇಕಾದ ನಾಗರಿಕರು" ಎಂದು ನೋಡಿದಾಗ ಮಾತ್ರ ನಿಜವಾದ ಸುಧಾರಣೆ ಸಾಧ್ಯ. ಇದು 1871ರ ಕರಾಳ ನೆರಳಿನಿಂದ ಹೊರಬರಲು ಇರುವ ಏಕೈಕ ದಾರಿ.[7]

ಸರ್ಕಾರದ ಪ್ರಯತ್ನಗಳನ್ನು ನಾವು ನೋಡುವುದಾದರೆ ಸರ್ಕಾರವು ಈ ಒಂದು ಸಮುದಾಯಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಲು ರೆಂಕೆ (Renke commission) ಕಮಿಷನ್ ಎಂಬ ಆಯೋಗವನ್ನು ರಚಿಸಿತ್ತು. ಇದು ಅವರ ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಅನೇಕ ಶಿಫಾರಸ್ಸುಗಳನ್ನು ನೀಡಿದೆ.

**ಶೈಕ್ಷಣಿಕ ಪ್ರೋತ್ಸಾಹ:** ಈ ಸಮುದಾಯದ ಮಕ್ಕಳಿಗೆ ವಿಶೇಷ ವಸತಿ ಶಾಲೆಗಳು ಮತ್ತು ವಿದ್ಯಾರ್ಥಿ ವೇತನಗಳನ್ನು ನೀಡುವುದು ಅವಶ್ಯಕ.

**SEED ಯೋಜನೆ (Scheme for Economic Empowerment of DNTs):** ಇದು ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ಮತ್ತು ಆರ್ಥಿಕ ನೆರವು ನೀಡುತ್ತದೆ. ಇದರ ವ್ಯಾಪ್ತಿಯನ್ನು ಹೆಚ್ಚಿಸುವುದು.ಈ ಸಮುದಾಯಗಳ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಹಂತದಿಂದಲೇ ಹೆಚ್ಚಿನ ಮೊತ್ತದ ಸ್ಕಾಲರ್‌ಶಿಪ್ ನೀಡುವುದರಿಂದ ಪೋಷಕರು ಮಕ್ಕಳನ್ನು ಕೆಲಸಕ್ಕೆ ಕಳುಹಿಸುವ ಬದಲು ಶಾಲೆಗೆ ಕಳುಹಿಸಲು ಪ್ರೇರೇಪಿತರಾಗುತ್ತಾರೆ. ವಸತಿ ಶಾಲೆಗಳ ಸ್ಥಾಪನೆ ಈ ಸಮುದಾಯಗಳು ಇಂದಿಗೂ ಅಲೆಮಾರಿ ಜೀವನ ನಡೆಸುತ್ತಿರುವುದರಿಂದ ಮಕ್ಕಳ ಶಿಕ್ಷಣ ಅರ್ಧಕ್ಕೆ ನಿಲ್ಲುವ ಸಾಧ್ಯತೆ ಇರುತ್ತದೆ. ಕರ್ನಾಟಕದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಗಳ ಮಾದರಿಯಲ್ಲಿ, ಈ ಸಮುದಾಯದ ಮಕ್ಕಳಿಗಾಗಿಯೇ ವಿಶೇಷ ವಸತಿ ಶಾಲೆಗಳನ್ನು ಅವರ ವಾಸಸ್ಥಳದ ಹತ್ತಿರ ಸ್ಥಾಪಿಸಬೇಕು.

**ಇತಿಹಾಸದ ಸರಿಪಡಿಸುವಿಕೆ:** ಬ್ರಿಟಿಷರು ಹೇರಿದ 'ಅಪರಾಧಿ' ಎಂಬ ಹಣೆಪಟ್ಟಿ ಎಷ್ಟು ಅನ್ಯಾಯಯುತವಾಗಿತ್ತು ಮತ್ತು ಈ ಸಮುದಾಯಗಳು ಸ್ವಾತಂತ್ರ್ಯ ಹೋರಾಟದಲ್ಲಿ ನೀಡಿದ ಕೊಡುಗೆಗಳೇನು ಎಂಬುದನ್ನು ಶಾಲಾ ಪಠ್ಯಪುಸ್ತಕಗಳಲ್ಲಿ ಸೇರಿಸಬೇಕು. ಇದರಿಂದ ಈ ಸಮುದಾಯದ ಮಕ್ಕಳಲ್ಲಿ ಆತ್ಮಗೌರವ ಹೆಚ್ಚುತ್ತದೆ.

**ದಾಖಲೆಗಳ ಸುಲಭ ಲಭ್ಯತೆ:** ಜಾತಿ ಮತ್ತು ಆದಾಯ ಪ್ರಮಾಣಪತ್ರ ಪಡೆಯುವ ಪ್ರಕ್ರಿಯೆಯನ್ನು ಈ ಸಮುದಾಯಗಳಿಗೆ ಸರಳಗೊಳಿಸಬೇಕು. ದಾಖಲೆಗಳಿಲ್ಲ ಎಂಬ ಕಾರಣಕ್ಕೆ ಯಾವ ಮಗುವಿಗೂ ಶಿಕ್ಷಣ ವಂಚಿತವಾಗದಂತೆ ನೋಡಿಕೊಳ್ಳಬೇಕು.

**ಜಾಗೃತಿ ಕಾರ್ಯಕ್ರಮಗಳು:** ಅಪರಾಧಿ ಬುಡಕಟ್ಟುಗಳೆಂದು (ವಿಮುಕ್ತ ಬುಡಕಟ್ಟುಗಳು) ಕರೆಯಲ್ಪಡುವ ಸಮುದಾಯಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಇದು

[7] ಲಕ್ಕಪ್ಪ ಗೌಡ., (1993) ಕರ್ನಾಟಕದ ಬುಡಕಟ್ಟುಗಳು (ಸಂ. 1 ಮತ್ತು 2), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

ಕೇವಲ ಆ ಸಮುದಾಯದವರಿಗಾಗಿ ಮಾತ್ರವಲ್ಲದೆ, ಸಮಾಜದ ಇತರ ವರ್ಗದವರು ಮತ್ತು ಸರ್ಕಾರಿ ಅಧಿಕಾರಿಗಳಿಗೂ ತಲುಪಬೇಕಾದ ಕಾರ್ಯಕ್ರಮವಾಗಿದೆ.

**ಶೈಕ್ಷಣಿಕ ಸಂಸ್ಥೆಗಳಲ್ಲಿ ಜಾಗೃತಿ:** ಯುವ ಪೀಳಿಗೆಯಲ್ಲಿರುವ ಪೂರ್ವಾಗ್ರಹಗಳನ್ನು ಹೋಗಲಾಡಿಸಲು ಇದು ಅತ್ಯುತ್ತಮ ವೇದಿಕೆ. ಇತಿಹಾಸಕಾರರು ಮತ್ತು ಸಮಾಜಶಾಸ್ತ್ರಜ್ಞರಿಂದ ಈ ಸಮುದಾಯಗಳು ಅನುಭವಿಸಿದ 'ಐತಿಹಾಸಿಕ ಅನ್ಯಾಯ'ದ ಬಗ್ಗೆ ಕಾಲೇಜುಗಳಲ್ಲಿ ಉಪನ್ಯಾಸ ಆಯೋಜಿಸುವುದು. ಮುಂದುವರಿದು ಪ್ರಬಂಧ ಮತ್ತು ಚರ್ಚಾಸ್ಪರ್ಧೆಯನ್ನು ಪ್ರಮುಖ ವಿಷಯವಾಗಿ "ಕ್ರಿಮಿನಲ್ ಟ್ರೈಬ್ಸ್ ಆಕ್ಟ್: ಒಂದು ಮಾನವ ಹಕ್ಕುಗಳ ಉಲ್ಲಂಘನೆ" ಎಂಬಂತಹ ವಿಷಯಗಳ ಮೇಲೆ ಸ್ಪರ್ಧೆಗಳನ್ನು ಏರ್ಪಡಿಸುವುದು.

**ಕಲಾ ಮಾಧ್ಯಮಗಳ ಬಳಕೆ:** ಜನಸಾಮಾನ್ಯರಿಗೆ ವಿಷಯವನ್ನು ತಲುಪಿಸಲು ಕಲೆ ಪ್ರಬಲವಾದ ಮಾಧ್ಯಮವಾಗಿದೆ. ಬ್ರಿಟಿಷ್ ಕಾಯ್ದೆಯು ಒಂದು ಕುಟುಂಬದ ಮೇಲೆ ಬೀರುತ್ತಿದ್ದ ಪರಿಣಾಮ ಮತ್ತು ಇಂದಿನ ಅವರ ಸ್ಥಿತಿಗತಿಗಳ ಬಗ್ಗೆ ಜನನಿಬಿಡ ಪ್ರದೇಶಗಳಲ್ಲಿ ಬೀದಿ ನಾಟಕ ಪ್ರದರ್ಶಿಸುವುದು.

**ಸಾಕ್ಷ್ಯಚಿತ್ರ ಪ್ರದರ್ಶನ:** ಈ ಸಮುದಾಯಗಳ ಬದುಕು, ಸಂಸ್ಕೃತಿ ಮತ್ತು ಅವರು ಎದುರಿಸುತ್ತಿರುವ ಸವಾಲುಗಳ ಕುರಿತಾದ ಕಿರುಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವುದು. ಸಾಂಪ್ರದಾಯಿಕ ಕಲೆಗಳ ಮೂಲಕವೇ ಅವರ ಇತಿಹಾಸವನ್ನು ಜನರಿಗೆ ತಿಳಿಸುವುದು.

**ಸಮುದಾಯದ ಒಳಗಿನ ಜಾಗೃತಿ:** ಈ ಸಮುದಾಯದ ಜನರಿಗೆ ತಮ್ಮ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು ಮುಖ್ಯ. ಸಂವಿಧಾನ ನೀಡಿರುವ ಹಕ್ಕುಗಳು, ಮೀಸಲಾತಿ ಸೌಲಭ್ಯಗಳು ಮತ್ತು 'ವಿಮುಕ್ತ ಬುಡಕಟ್ಟು' ಅಡಿಯಲ್ಲಿ ಸಿಗುವ ಸರ್ಕಾರಿ ಯೋಜನೆಗಳ (SEED ಯೋಜನೆ ಇತ್ಯಾದಿ) ಬಗ್ಗೆ ಮಾಹಿತಿ ನೀಡುವುದು ಆಧಾರ್ ಕಾರ್ಡ್, ಜಾತಿ ಪ್ರಮಾಣಪತ್ರ ಮತ್ತು ವೋಟರ್ ಐಡಿ ಪಡೆಯಲು ಅವರಿಗೆ ಸಹಾಯ ಮಾಡುವ ಶಿಬಿರಗಳನ್ನು ಅವರ ವಾಸಸ್ಥಳಗಳಲ್ಲೇ (ತಾಂಡಾ/ಹಟ್ಟಿ) ಏರ್ಪಡಿಸುವುದು.

**ಸರ್ಕಾರಿ ಅಧಿಕಾರಿಗಳಿಗೆ ಸಂವೇದನಾ ಕಾರ್ಯಕ್ರಮಗಳು:** ಈ ಸಮುದಾಯಗಳನ್ನು ನೋಡುವ ದೃಷ್ಟಿಕೋನವನ್ನು ಬದಲಿಸಲು ಪೊಲೀಸ್ ಸಿಬ್ಬಂದಿಗೆ ಮತ್ತು ಗ್ರಾಮ ಆಡಳಿತಾಧಿಕಾರಿಗಳಿಗೆ ವಿಶೇಷ ಕಾರ್ಯಾಗಾರಗಳನ್ನು ನಡೆಸುವುದು. ಅವರಿಗೆ ಈ ಸಮುದಾಯಗಳ ಇತಿಹಾಸದ ಬಗ್ಗೆ ಅರಿವು ಮೂಡಿಸುವುದು.

**ವಸ್ತುಪ್ರದರ್ಶನ, ಡಿಜಿಟಲ್ ಆರ್ಕೈವ್ಸ್, ಮತ್ತು ಛಾಯಾಚಿತ್ರ ಪ್ರದರ್ಶನ:** ಬ್ರಿಟಿಷರ ಕಾಲದ ದಾಖಲೆಗಳು, ಸೆಟಲ್‌ಮೆಂಟ್‌ಗಳ ಫೋಟೋಗಳು ಮತ್ತು ಅಂದಿನ ಕರಾಳ ಕಾಯ್ದೆಯ ಪ್ರತಿಗಳನ್ನು ಪ್ರದರ್ಶಿಸುವ ಮೂಲಕ ಇತಿಹಾಸವನ್ನು ಜನರಿಗೆ ಮನವರಿಕೆ ಮಾಡಿಕೊಡುವುದು. ಹ್ಯಾಶ್‌ಟ್ಯಾಗ್ ಬಳಸಿ ಈ ಸಮುದಾಯದ ಯಶಸ್ವಿ ವ್ಯಕ್ತಿಗಳ ಕಥೆಗಳನ್ನು ಹಂಚಿಕೊಳ್ಳುವುದು.

ಅಪರಾಧಿ ಬುಡಕಟ್ಟುಗಳ ಕಥೆಯು ಕೇವಲ ಶೋಷಣೆಯ ಕಥೆಯಲ್ಲ, ಅದು ಅಪ್ರತಿಮ ಸಹಿಷ್ಣುತೆಯ ಕಥೆಯೂ ಹೌದು. ಕಾನೂನುಬದ್ಧವಾಗಿ ಅವರು ವಿಮುಕ್ತರಾಗಿದ್ದಾರೆ, ಆದರೆ ಮಾನಸಿಕವಾಗಿ ಮತ್ತು ಸಾಮಾಜಿಕವಾಗಿ ಅವರು ಇನ್ನೂ ಮುಖ್ಯವಾಹಿನಿಗೆ ಬರಬೇಕಿದೆ.

ಪ್ರಜಾಪ್ರಭುತ್ವದ ಈ ಕಾಲದಲ್ಲಿ, ಯಾವುದೇ ವ್ಯಕ್ತಿಯನ್ನು ಅವನ ಹುಟ್ಟಿನ ಆಧಾರದ ಮೇಲೆ ಅಳೆಯುವುದು ನಾಗರಿಕ ಸಮಾಜಕ್ಕೆ ಶೋಭೆಯಲ್ಲ. ಅವರಿಗೆ ಗೌರವಯುತ ಜೀವನ ಮತ್ತು ಸಮಾನ ಅವಕಾಶಗಳನ್ನು ನೀಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.[8]

ಕೊನೆಯದಾಗಿ ಹೇಳುವುದಾದರೆ ಕರ್ನಾಟಕದ ಬುಡಕಟ್ಟುಗಳ ಇತಿಹಾಸ ಕೇವಲ ಬ್ರಿಟಿಷರ ಕ್ರೌರ್ಯದ ಕಥೆಯಲ್ಲ. ಬದಲಿಗೆ ಇದು ಅವರ ಬದುಕುಳಿಯುವಿಕೆ ಮತ್ತು ಹೋರಾಟದ ಕಥೆಯಾಗಿದೆ. ಇವರನ್ನು ಮುಖ್ಯವಾಹಿನಿಗೆ ತರಲು ಕೇವಲ ಸರ್ಕಾರಿ ಯೋಜನೆಗಳು ಸಾಲದು, ಬದಲಿಗೆ ಇವರನ್ನು ಸಮಾಜದ ಸಮಾನ ನಾಗರಿಕರನ್ನಾಗಿ ಗೌರವದಿಂದ ಕಾಣುವ ಮನಸ್ಥಿತಿ ಬದಲಾಗಬೇಕು. ಬ್ರಿಟೀಷರು ಸೃಷ್ಟಿಸಿದ ಈ 'ಅಪರಾಧಿ ಮುದ್ರೆ' ಒಂದು ಸಾಮಾಜಿಕ ಅನ್ಯಾಯವಾಗಿತ್ತು. ಇದು ಕೇವಲ ಕಾನೂನಿನ ಸಮಸ್ಯೆಯಾಗಿರದೆ, ಒಂದು ಇಡೀ ಸಮುದಾಯದ ಘನತೆಯನ್ನು ಕಿತ್ತುಕೊಂಡ ಕೃತ್ಯವಾಗಿತ್ತು. ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ಸಮುದಾಯಗಳಿಗೆ ಸಾಮಾಜಿಕ ನ್ಯಾಯ, ಶಿಕ್ಷಣ ಮತ್ತು ಆರ್ಥಿಕ ಭದ್ರತೆ ನೀಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

**ಪರಾಮರ್ಶನ ಗ್ರಂಥಗಳು.**


- ಬೋರಲಿಂಗಯ್ಯ, ಹಿ.ಚಿ. (2003). *ಅಲೆಮಾರಿ ಅಂತರಂಗ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಲಕ್ಕಪ್ಪ ಗೌಡ., (1993), ಕರ್ನಾಟಕದ ಬುಡಕಟ್ಟುಗಳು (ಸಂ1&2) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
- ರಾಜಣ್ಣ, ಟಿ.ಡಿ. (2018), ಅಲಕ್ಷಿತ ಸಮುದಾಯಗಳ ಇತಿಹಾಸ. ಪಲ್ಲವ ಪ್ರಕಾಶನ, ಬೆಂಗಳೂರು.
- Bhavani Shankar Nhargav (1949), The Criminal Tribes : A Socio-Economic Study, Ethnographic and Folk Culture Society, Luknow
- Edgar Thurston., (1909), Castes and Criminality and Colonialism, Oxford University Press, New Delhi.
- Nagaraj, (2010), The flaming feet and other essays, The Dalit Movement in India, South Asia Press, New Delhi.
- Nitya Tripaty.,(2021), The criminal tribes act 1871,Garuda Prakashana, New Delhi.
- Saki-making history (2004), Karnataka's People and Their Past Vol-2 Colonial Shock- Armed Struggle 1800-1857) Vimukti Prakashana, Banglore.


[8] ಪ್ರಜಾವಾಣಿ. ಅಪರಾಧದ ಹಣ ಪಟ್ಟಿ ಕಟ್ಟಿಕೊಂಡಿದ್ದ ಆದಿವಾಸಿಗಳು ಮುಖ್ಯ ವಾಹಿನಿಗೆ, 12 ಮೇ 29